**ದಿನಾಂಕಃ 27.11.2024 ರಂದು ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಪಾಟೀ–ಸವಾಲುಃ ಪ್ರತಿವಾದಿ ಪರ ಶ್ರೀ ಬಿ.ಎನ್.ಟಿ. ವಕೀಲರಿಂದಃ–**

2 ನೇ ವಾದಿ ನನ್ನ ತಂದೆ. ದಿನಾಂಕಃ24.01.1996 ನೇದ್ದರಲ್ಲಿ ಆದ ಪಾಲುವಿಭಾಗ ಪತ್ರದ ಬಗ್ಗೆ ನನಗೆ ಮಾಹಿತಿ ಇರುತ್ತದೆ. 1 ನೇ ವಾದಿ ನನ್ನ ದೊಡ್ಡಪ್ಪ. 1 ನೇ ವಾದಿಗೆ ಸರ್ವೆ ನಂಬರ್ಃ135 ರಲ್ಲಿ 3 ಎಕರೆ 10 ಗುಂಟೆ ಜಮೀನು ಅವರ ಪಾಲಿಗೆ ಹೋಗಿರುತ್ತದೆ. ಸದರಿ 3 ಎಕರೆ 10 ಗುಂಟೆ ಜಮೀನಿನ ಚೆಕ್ಕುಬಂದಿ ನಿಪಿ–6 ರಲ್ಲಿ ಬರೆದಿರುವುದು ಸರಿ ಇರುತ್ತದೆ. ಅವರ ಜಮೀನಿನ ದಕ್ಷಿಣಕ್ಕೆ ಬಂಡೀದಾರಿ ಬರುತ್ತದೆ ಎಂದರೆ ಸರಿ. ಅದನ್ನು ನಾವು ಓಡಾಡಲು ಮಾಡಿಕೊಂಡಿರುತ್ತೇವೆ. ಸದರಿ ಬಂಡೀದಾರಿಯ ಅಗಲ 20 ಅಡಿ ಇರುತ್ತದೆ ಎಂದರೆ ಸರಿಯಲ್ಲ, ಅದು ಕೇವಲ 6 ಅಡಿ ಇರುತ್ತದೆ.

ಈ ಮೇಲೆ ಹೇಳಿದ ಬಂಡೀದಾರಿ ಸಾರ್ವಜನಿಕ ರಸ್ತೆ ಎಂದು ತಹಶೀಲ್ದಾರ್ ಹಿರಿಯೂರು ಇವರು ಆದೇಶ ಮಾಡಿರುತ್ತಾರೆ ಎಂದರೆ ಸರಿ. ಸದರಿ ಆದೇಶವನ್ನು ಮೇಲ್ಮನವಿ ಸಲ್ಲಿಸಿ ಪ್ರಶ್ನಿಸಿರುತ್ತೇವೆ. ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಸಲ್ಲಿಸಿದ ಮೇಲ್ಮನವಿಯಲ್ಲಿ ಸಿವಿಲ್ ನ್ಯಾಯಾಲಯದಲ್ಲಿ ವ್ಯಾಜ್ಯ ಬಗೆಹರಿಸಿಕೊಳ್ಳಿ ಎಂದು ಹಿಂಬರಹ ನೀಡಿರುತ್ತಾರೆ. ವಾದಪತ್ರದ ಜೊತೆಗೆ ಸಲ್ಲಿಸಿರುವ ಕಚ್ಚಾ ನಕಾಶೆಯನ್ನು ತಯಾರಿಸಲು ವಕೀಲರಿಗೆ ನಾನು, 1 ಮತ್ತು 3 ನೇ ವಾದಿ ಮಾಹಿತಿ ನೀಡಿರುತ್ತೇವೆ. ಸದರಿ ನಕಾಶೆಯಲ್ಲಿ ಎ.ಬಿ.ಸಿ.ಡಿ. ಎಂದು ಗುರುತಿಸಿಕೊಂಡಿರುವುದು ರಸ್ತೆಯಾಗಿರುತ್ತದೆ. ಸದರಿ ರಸ್ತೆ ಪೂರ್ವದಿಂದ ಪಶ್ಚಿಮಕ್ಕೆ ಹೋಗುತ್ತದೆ. ಸದರಿ ರಸ್ತೆ ಉತ್ತರದಿಂದ ದಕ್ಷಿಣಕ್ಕೆ ಹೋಗುತ್ತದೆ ಎಂದರೆ ಸರಿಯಲ್ಲ.

ಹರಿಯಬ್ಬೆಯಿಂದ ವೇಣುಕಲ್ಲುಗುಡ್ಡಕ್ಕೆ ಹೋಗುವ ರಸ್ತೆ ಪೂರ್ವದಿಂದ ಪಶ್ಚಿಮಕ್ಕೆ ಹೋಗುತ್ತದೆ ಎಂದರೆ ಸರಿಯಲ್ಲ. ಉತ್ತರದಿಂದ ದಕ್ಷಿಣಕ್ಕೆ ಹೋಗುತ್ತದೆ. ಸದರಿ ಕಚ್ಚಾ ನಕಾಶೆಯಲ್ಲಿ ನಕ್ಷೆಯ ನಿಯಮಗಳ ಪ್ರಕಾರ ದಿಕ್ಸೂಚಿ ತೋರಿಸಿರುವುದಿಲ್ಲ ಎಂದರೆ ಸರಿ. ಕಚ್ಚಾ ನಕಾಶೆಯಲ್ಲಿ ಎ.ಬಿ.ಸಿ.ಡಿ

ಎಂದು ತೋರಿಸುವ ರಸ್ತೆಯನ್ನು ನಾನು ಮತ್ತು ವಾದಿಯರು ಸೇರಿ ಬಂದ್ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಅದನ್ನು ತಹಶೀಲ್ದಾರ್ ರವರು ಬಂದು ತೆಗೆಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಎ.ಬಿ.ಸಿ.ಡಿ. ರಸ್ತೆಯ ಪೂರ್ವ ಮತ್ತು ಪಶ್ಚಿಮಕ್ಕೆ ನಮ್ಮ ಜಮೀನು ಬರುತ್ತದೆ. ದಕ್ಷಿಣಕ್ಕೆ ತಿಮ್ಮಯ್ಯನವರ ಜಮೀನು ಇರುತ್ತದೆ. ಸದರಿ ತಿಮ್ಮಯ್ಯನವರ ಜಮೀನಿಗೆ ಎ.ಬಿ.ಸಿ.ಡಿ. ರಸ್ತೆ ಮೂಲಕವೇ ಹೋಗಬೇಕು ಎಂದರೆ ಸರಿಯಲ್ಲ. ವಿ.ಕೆ.ಗುಡ್ಡಕ್ಕೆ ಹೋಗುವ ರಸ್ತೆಯ ಮೂಲಕ ಹೋಗಬಹುದು.

ಪ್ರತಿವಾದಿಯರ ಜಮೀನಿನ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಹರಿಯಬ್ಬೆಯಿಂದ ಹರಿಯಬ್ಬೆ ಪಾಳ್ಯಕ್ಕೆ ಹೋಗಲು ಒಂದು ಟಾರ್ ರಸ್ತೆ ಇರುತ್ತದೆ ಎಂದರೆ ಸರಿ. ಸದರಿ ರಸ್ತೆ ಸರ್ವೆ ನಂಬರ್ಃ 135, 127, 129 ಮತ್ತು 114 ರ ಮೂಲಕ ಹಾದು ಹೋಗುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂಬರ್ಃ135 ರ ಪಶ್ಚಿಮ ದಿಕ್ಕಿಗೆ ಸರ್ವೆ ನಂಬರ್ಃ136 ಬರುತ್ತದೆ ಎಂದರೆ ಸರಿಯಲ್ಲ. ಕಚ್ಚಾ ನಕಾಶೆಯಲ್ಲಿ ತೋರಿಸಿರುವ ಎ.ಬಿ.ಸಿ.ಡಿ ರಸ್ತೆ ಸರ್ವೆ ನಂಬರ್ಃ219/2, ಸರ್ವೆ ನಂಬರ್ಃ210/3, ಸರ್ವೆ ನಂಬರ್ಃ210/4, ಸರ್ವೆ ನಂಬರ್ಃ211/4, ಸರ್ವೆ ನಂಬರ್ಃ211/1, ಸರ್ವೆ ನಂಬರ್ಃ212 ದ ಸರ್ವೆ ನಂಬರ್ಃ 213, ಸರ್ವೆ ನಂಬರ್ಃ214, ಸರ್ವೆ ನಂಬರ್ಃ215 ಮತ್ತು 216 ರ ಮೂಲಕ ಹಾದು ಹೋಗಿ ಕೆಂಚಯ್ಯನಹಟ್ಟಿಗೆ ಸೇರಿಕೊಳ್ಳುತ್ತದೆ ಎಂದರೆ ಸರಿಯಲ್ಲ.

ಕೆಂಚಯ್ಯನಹಟ್ಟಿ ಗ್ರಾಮವನ್ನು ನಾನು ನೋಡಿರುತ್ತೇನೆ. ಸದರಿ ಗ್ರಾಮದಲ್ಲಿ ಸುಮಾರು 10 ಮನೆಗಳು ಇರುತ್ತದೆ. ಸದರಿ ಗ್ರಾಮದಿಂದ ದಕ್ಷಿಣದ ಕಡೆಗೆ ಹೋಗುವಾಗ ವೀರನಾಗಮ್ಮನ ದೇವಸ್ಥಾನ ಇರುತ್ತದೆ ಎಂದರೆ ಸರಿ. ಸದರಿ ದೇವಸ್ಥಾನಕ್ಕೆ ತುಂಬಾ ಜನ ಭಕ್ತರು ಬಂದು ಹೋಗಿ ಮಾಡುತ್ತಾರೆ ಎಂದರೆ ಸರಿ. ಕೆಂಚಯ್ಯನಹಟ್ಟಿ ಗ್ರಾಮದ ಮಕ್ಕಳು ಶಾಲೆಗೆ ಹೋಗಬೇಕದಾರೆ ನಕಾಶೆಯಲ್ಲಿ ತೋರಿಸಿರುವ ಎ.ಬಿ.ಸಿ.ಡಿ ರಸ್ತೆಯ ಮೂಲಕವೇ ಹೋಗಬೇಕು ಎಂದರೆ ಸರಿಯಲ್ಲ. ವೀರನಾಗಮ್ಮನ ದೇವಸ್ಥಾನಕ್ಕೆ ಹೋಗಬೇಕಾದರೆ ಅದೇ ರಸ್ತೆಯಲ್ಲಿಯೇ ಹೋಗಬೇಕು ಎಂದರೆ ಸರಿಯಲ್ಲ.

2 ನೇ ವಾದಿಗೆ ಸರ್ವೆ ನಂಬರ್‌ಃ135 ರಲ್ಲಿ 2 ಎಕರೆ 15 ಗುಂಟೆ ಜಮೀನು ಬಂದಿರುತ್ತದೆ. ಸದರಿ ಜಮೀನಿನ ಪೂರ್ವಕ್ಕೆ– ದಾಸಪ್ಪನ ಭಾಗ, ಪಶ್ಚಿಮಕ್ಕೆ– ಶಶಿಧರ್ ಜಮೀನು, ಉತ್ತರಕ್ಕೆ–ನಾಗರಾಜ್‌ರವರ ಜಮೀನು ಮತ್ತು ದಕ್ಷಿಣಕ್ಕೆ– ತಿಮ್ಮಜ್ಜನವರ ಜಮೀನು ಇರುತ್ತದೆ. 2 ನೇ ವಾದಿಯ ಭಾಗಕ್ಕೆ ಬಂದ ಜಮೀನಿನ ಉತ್ತರಕ್ಕೆ ಗೋವಿಂದಪ್ಪನವರ ಜಮೀನು ಬರುತ್ತದೆ. ಸರ್ವೆ ನಂಬರ್‌ಃ135 ರಲ್ಲಿ ತಿಮ್ಮಣ್ಣನವರಿಗೆ ಎಷ್ಟು ಜಮೀನು ಭಾಗಕ್ಕೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಕಾಶೆಯಲ್ಲಿ ತಿಮ್ಮಣ್ಣನವರ ಜಮೀನಿನ ದಕ್ಷಿಣ ದಿಕ್ಕಿಗೆ ರಸ್ತೆ ಎಂದು ತೋರಿಸಿರುತ್ತೇವೆ. ಎ.ಬಿ.ಸಿ.ಡಿ ರಸ್ತೆ ತಿಮ್ಮಣ್ಣನವರ ಜಮೀನಿನ ದಕ್ಷಿಣ ದಿಕ್ಕಿಗೆ ಇರುತ್ತದೆ. ನಕಾಶೆಯಲ್ಲಿ ಮೂಡ್ಲಗಿರಿಯಪ್ಪನವರ ಜಮೀನು ದಕ್ಷಿಣ ದಿಕ್ಕಿಗೆ ಇರುತ್ತದೆ ಎಂದು ತೋರಿಸಿರುತ್ತಾರೆ.

ಪ್ರತಿವಾದಿಗಳ ಜಮೀನು ವಾದಿಯರ ಜಮೀನುಗಳ ಪಶ್ಚಿಮ ದಿಕ್ಕಿಗೆ ಬರುತ್ತವೆ. ಪ್ರತಿವಾದಿಗಳು ತಮ್ಮ ಜಮೀನಿಗೆ ಕಚ್ಚಾ ನಕಾಶೆಯಲ್ಲಿ ತೋರಿಸಿರುವ ಎ.ಬಿ.ಸಿ.ಡಿ. ರಸ್ತೆಯ ಮೂಲಕವೇ ಹಾದುಹೋಗಬೇಕು ಎಂದರೆ ಸರಿಯಲ್ಲ. ನಿಪಿ–1 ಪಹಣಿ ಪತ್ರಿಕೆಯಲ್ಲಿ 16 ಗುಂಟೆ ಜಮೀನನ್ನು ಬಿ ಖರಾಬು ಎಂದು ರಸ್ತೆಗಾಗಿಯೇ ಬಿಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂಬರ್‌ಃ135 ಒಟ್ಟು 32 ಎಕರೆ 24 ಗುಂಟೆ ಜಮೀನಿನಲ್ಲಿ 1 ಎಕರೆ 8 ಗುಂಟೆ ಖರಾಬು ಎಂದು ಬಿಟ್ಟಿರುತ್ತಾರೆ ಎಂದರೆ ಸರಿಯಲ್ಲ. ಖರಾಬು ಜಮೀನಿನಲ್ಲಿ ಜಮೀನುದಾರರಿಗೆ ಯಾವುದೇ ಮಾಲೀಕತ್ವದ ಹಕ್ಕು ಇರುವುದಿಲ್ಲ ಎಂದರೆ ಸರಿ. ಕಚ್ಚಾ ನಕಾಶೆಯಲ್ಲಿ ತೋರಿಸಿರುವ ಎ.ಬಿ.ಸಿ.ಡಿ ರಸ್ತೆ ಸಾರ್ವಜನಿಕ ರಸ್ತೆಯಾಗಿದ್ದು ಉದ್ದೇಶಪೂರ್ವಕವಾಗಿ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಮಾಹಿತಿಯ ಆಧಾರದ ಮೇಲೆ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತ ಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹಿರಿಯೂರು.